RPAD

# ಕರ್ನಾಟಕ ಸರ್ಕಾರ

ವಿಷಯ: ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ರೇಪಿಯರ್ / ಲಾಳ ರಹಿತ ಮಗ್ಗಗಳ ಎಂ.ಎಸ್.ಎಂ.ಇ ಘಟಕಗಳಿಗೆ ಶೇ.50 ರಷ್ಟು ವಿದ್ಯುತ್ ಸಹಾಯಧನವನ್ನು ಒದಗಿಸುವ ಯೋಜನೆಯ ಮಾರ್ಗಸೂಚಿ.

Office of the Commissioner for Textiles Bangalore No. 832 Date 17/01/18

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ವಾಕೈ 27 ಜಕೈಯೋ 2017, ದಿನಾಂಕ: 24.05.2017.
2. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಕೈಜಇ/ ಅಂಕಿಅಂಶ/ ಆಯವ್ಯಯ/2016-17, ದಿನಾಂಕ: 17.05.2017, 06.7.2017 ಮತ್ತು 14.8.2017
3. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 409 ವೆಚ್ಚ-1 2017 ದಿನಾಂಕ: 11.12.2017

- - -

**ಸರ್ಕಾರಿ ಆದೇಶ ಸಂಖ್ಯೆ: ವಾಕೈ 27 ಜಕೈಯೋ 2017(ಭಾಗ), ಬೆಂಗಳೂರು ದಿನಾಂಕ:22.12.2017**

2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಕಂಡಿಕೆ 409(4) ರಲ್ಲಿ ಘೋಷಿಸಿರುವಂತೆ, ಲೋಟೆನ್ಷನ್ ವಿದ್ಯುತ್ ಪಡೆಯುತ್ತಿರುವ ರೇಪಿಯರ್ ಮಗ್ಗಗಳಿಗೆ ಶೇ.50 ರಷ್ಟು ವಿದ್ಯುತ್ ಸಹಾಯಧನವನ್ನು ರಾಜ್ಯ ಸರ್ಕಾರದಿಂದ ನೀಡಲು ಯೋಜಿಸಲಾಗಿದೆ.

ಓದಲಾದ (1) ರ ಆದೇಶದಂತೆ, 2017-18ನೇ ಸಾಲಿನಲ್ಲಿ ಲೋಟೆನ್ಷನ್ ವಿದ್ಯುತ್ ಸಂಪರ್ಕ ಪಡೆದು ಕಾರ್ಯನಿರ್ವಹಿಸುತ್ತಿರುವ ರೇಪಿಯರ್ / ಲಾಳ ರಹಿತ ವಿದ್ಯುತ್ ಮಗ್ಗದ ಘಟಕಗಳಿಗೆ ಶೇ.50 ರಷ್ಟು ವಿದ್ಯುತ್ ಸಹಾಯಧನವನ್ನು ನೀಡುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಓದಲಾದ (2) ರಲ್ಲಿ 2017-18ನೇ ಸಾಲಿನ ಆಯವ್ಯಯ ಘೋಷಣೆಯಂತೆ ರೇಪಿಯರ್ / ಲಾಳ ರಹಿತ ಏರ್‌ಜೆಟ್ ವಿದ್ಯುತ್ ಮಗ್ಗಗಳ ಎಂ.ಎಸ್.ಎಂ.ಇ. ಘಟಕಗಳಿಗೆ ಶೇಕಡ 50 ರಷ್ಟು ವಿದ್ಯುತ್ ಸಹಾಯಧನವನ್ನು ಒದಗಿಸುವ ಯೋಜನೆಯ ಕರಡು ಮಾರ್ಗಸೂಚಿಯನ್ನು ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಓದಲಾದ (3) ರಲ್ಲಿ ರೇಪಿಯರ್ / ಲಾಳ ರಹಿತ ಏರ್‌ಜೆಟ್ ವಿದ್ಯುತ್ ಮಗ್ಗಗಳಿಗೆ ಶೇಕಡ 50 ರಷ್ಟು ಸಹಾಯಧನದ ಯೋಜನೆಯನ್ನು ಗರಿಷ್ಟ 150 ಹೆಚ್‌ಪಿ ವರೆಗಿನ ಹೈಟೆನ್ಷನ್ ವಿದ್ಯುತ್ ಸಂಪರ್ಕ ಪಡೆದ ಘಟಕಗಳಿಗೆ ಮಾತ್ರ ವಿಸ್ತರಿಸಲು ಹಾಗೂ ಒಂದು ವರ್ಷದಲ್ಲಿ 10 ಘಟಕಗಳಿಗೆ ಮಾತ್ರ ಈ ಸಹಾಯಧನವನ್ನು ಸೀಮಿತಗೊಳಸಲು ಆರ್ಥಿಕ ಇಲಾಖೆಯು ಸಹಮತಿ ನೀಡಿರುತ್ತದೆ.

ಪ್ರಸ್ತುತ ರಾಜ್ಯ ಸರ್ಕಾರದಿಂದ 20 ಹೆಚ್‌ಪಿ ವಿದ್ಯುತ್ ಸಂಪರ್ಕ ಹೊಂದಿದ ಸಾಮಾನ್ಯ ವಿದ್ಯುತ್ ಮಗ್ಗಗಳ ಘಟಕಗಳಿಗೆ 1 ಯುನಿಟ್‌ಗೆ ರೂ.1.25 ಪೈಸೆ ರಿಯಾಯಿತಿ ದರದಲ್ಲಿ ವಿದ್ಯುತ್ ಅನ್ನು ಒದಗಿಸಲಾಗುತ್ತಿದೆ.

ಗರಿಷ್ಠ 150 ಹೆಚ್.ಪಿ. ವರೆಗಿನ ಹೈಟೆನ್ಷನ್ ವಿದ್ಯುತ್ ಸಂಪರ್ಕ ಪಡೆದ ರೇಪಿಯರ್ / ಲಾಳ ರಹಿತ ಏರ್‌ಜೆಟ್ ಮಗ್ಗಗಳ ಎಂ.ಎಸ್.ಎಂ.ಇ. ಘಟಕಗಳಿಗೆ ಶೇ.50 ರಷ್ಟು ವಿದ್ಯುತ್ ಸಹಾಯಧನವನ್ನು ಒದಗಿಸುವುದು ಅವಶ್ಯಕತೆ ಇರುತ್ತದೆ.

**ಎಂ.ಎಸ್.ಎಂ.ಇ (Micro, Small, Medium Enterprises: Investment in plant & machinery) ಘಟಕದ ವಿವರಣೆ**

- **Micro** – ರೂ.25.00 ಲಕ್ಷಗಳವರೆಗಿನ ಯೋಜನಾ ವೆಚ್ಚದಲ್ಲಿ ಸ್ಥಾಪಿಸುವ ಘಟಕ.
- **Small** – ರೂ.25.00 ಲಕ್ಷಗಳಿಂದ ರೂ.500.00 ಲಕ್ಷಗಳ ಯೋಜನಾ ವೆಚ್ಚದಲ್ಲಿ ಸ್ಥಾಪಿಸುವ ಘಟಕ.
- **Medium** – ರೂ.500.00 ಲಕ್ಷಗಳಿಂದ ರೂ.1000.00 ಲಕ್ಷಗಳ ಯೋಜನಾ ವೆಚ್ಚದಲ್ಲಿ ಸ್ಥಾಪಿಸುವ ಘಟಕ

ರಾಜ್ಯದ ವಿದ್ಯುತ್ ಮಗ್ಗ ನೇಕಾರರ ಉತ್ಪಾದನಾ ಚಟುವಟಿಕೆಗೆ ಹಾಗೂ ಅವರ ಅಭಿವೃದ್ಧಿಗೆ ಕಾಲಬದ್ಧವಾಗಿ ಕಾರ್ಯಕ್ರಮವನ್ನು ಜಾರಿಗೊಳಿಸಲು, ಹಾಗೂ ಯೋಜನೆಯಡಿ ಅನುದಾನ ಬಿಡುಗಡೆ ಮಾಡಲು ಅನುಸರಿಸಬೇಕಾದ ಕಾರ್ಯವಿಧಾನಗಳಿಗೆ ಮಾರ್ಗಸೂಚಿಯನ್ನು ಈ ಕೆಳಗಿನಂತೆ ಹೊರಡಿಸಲಾಗಿದೆ.

**ಘಟಕಗಳ ಅರ್ಹತೆ:**

- ಕರ್ನಾಟಕ ರಾಜ್ಯದಲ್ಲಿ ಘಟಕವನ್ನು ಸ್ಥಾಪಿಸಿರಬೇಕು.
- ರೇಪಿಯರ್ / ಲಾಳ ರಹಿತ ಏರ್‌ಜೆಟ್ ಮಗ್ಗಗಳ ಎಂ.ಎಸ್.ಎಂ.ಇ. ಘಟಕವೆಂದು ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ / ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ನೊಂದಾಯಿಸಿರಬೇಕು.
- ರೇಪಿಯರ್ / ಲಾಳ ರಹಿತ ಏರ್‌ಜೆಟ್ ಮಗ್ಗಗಳೊಂದಿಗೆ ವೈಂಡಿಂಗ್, ವಾರ್ಪಿಂಗ್, ಏರ್ ಕಂಪ್ರೆಸರ್ ಮತ್ತು ನೇಯ್ಗೆ ಪೂರಕ ಯಂತ್ರಗಳನ್ನು ಹೊಂದಿರುವ ಘಟಕಗಳಿಗೆ ಅನ್ವಯಿಸುತ್ತದೆ.
- ಗರಿಷ್ಠ 150 ಹೆಚ್.ಪಿ. ವರೆಗಿನ ಹೈಟೆನ್ಶನ್ ವಿದ್ಯುತ್ ಸಂಪರ್ಕ ಹೊಂದಿರುವ ಹಾಲಿ ಇರುವ ಘಟಕ / ಹೊಸ ರೇಪಿಯರ್ / ಲಾಳ ರಹಿತ ಮಗ್ಗಗಳ ಘಟಕಗಳು ಅರ್ಹತೆ ಹೊಂದಿರುತ್ತದೆ.

**ಹಣಕಾಸಿನ ನೆರವು:**

ಆಯಾಯ ಘಟಕಗಳು ಸಂಬಂಧಿಸಿದ ಎಸ್ಕಾಂಗಳಿಗೆ ವಿದ್ಯುತ್ ಬಿಲ್ ಪಾವತಿ ಮಾಡಿದ ನಂತರ, ವಿದ್ಯುತ್ ಬಿಲ್ಲಿನ ಶೇ.50 ರಷ್ಟು ವಿದ್ಯುತ್ ಸಹಾಯಧನವನ್ನು ಪಡೆಯಲು ಪ್ರತಿ ತ್ರೈಮಾಸಿಕ ಅವಧಿಗೆ ಕೋರಿಕೆ ಸಲ್ಲಿಸಿದ ಮೇಲೆ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಪ್ರಮಾಣೀಕರಿಸಿಕೊಂಡು ಶೇ. 50 ರಷ್ಟು ವಿದ್ಯುತ್ ದರವನ್ನು ಮರುಪಾವತಿ ಪಡೆಯಬಹುದು.

**ಫಲಾನುಭವಿಗಳಿಂದ ಪಡೆಯಬೇಕಾದ ದಾಖಲಾತಿಗಳು:**

- ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಮಾಹಿತಿ.
- ಇಲಾಖೆಯ ನೊಂದಣಿ ಪ್ರತಿ.
- ಕೇಂದ್ರ ಸರ್ಕಾರದ ಎಂ.ಎಸ್.ಎಂ.ಇ. ಉದ್ಯೋಗ ಆಧಾರ್ ಪ್ರಮಾಣ ಪತ್ರ / ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಎಂ.ಎಸ್.ಎಂ.ಇ ಘಟಕವೆಂದು ನೊಂದಾಯಿಸಿದ ಪ್ರಮಾಣ ಪತ್ರ.
- ಇತ್ತೀಚಿನ ಭಾವಚಿತ್ರ ಹಾಗೂ ಘಟಕದ ಫೋಟೊ ಪ್ರತಿ.
- ರೇಪಿಯರ್ / ಲಾಳ ರಹಿತ ಮಗ್ಗಗಳನ್ನು ಸ್ಥಾಪಿಸಿರುವ ಕುರಿತು ದಾಖಲಾತಿ.
- ವಿದ್ಯುತ್ ಸಂಪರ್ಕ ಹೊಂದಿರುವ ದಾಖಲಾತಿ ಆರ್.ಆರ್.ನಂ & ಬಿಲ್ ಮತ್ತು ರಸೀದಿಗಳು.
- ರೇಪಿಯರ್ / ಲಾಳ ರಹಿತ ಮಗ್ಗಗಳನ್ನು ಸ್ಥಾಪಿಸಿರುವ ಸ್ವಂತ / ಬಾಡಿಗೆ ಸ್ಥಳದ ದಾಖಲಾತಿ
- ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಸ್ಥಳ ಪರಿಶೀಲನಾ ವರದಿ.

..3

**ಅನುಷ್ಠಾನ:**

- ರೇಪಿಯರ್ / ಲಾಳ ರಹಿತ ಮಗ್ಗಗಳ ಘಟಕವೆಂದು ಕೈಮಗ್ಗ ಮತ್ತು ಜವಳ ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಯಲ್ಲಿ ನೊಂದಾಯಿಸಿಕೊಳ್ಳಬೇಕು.
- ಕೈಮಗ್ಗ ಮತ್ತು ಜವಳ ಇಲಾಖೆಯ ಜಿಲ್ಲಾ ಮಟ್ಟದ ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು, ಅಸಂಘಟಿತ ವಲಯದ / ಘಟಕಗಳ ಫಲಾನುಭವಿಗಳನ್ನು ನಿಯಮಾನುಸಾರ ಆಯ್ಕೆ ಮಾಡಿ ಫಲಾನುಭವಿಗಳ ಪ್ರಸ್ತಾವನೆಗಳನ್ನು ಮಂಜೂರಾತಿಗಾಗಿ ಕೇಂದ್ರ ಕಛೇರಿಗೆ / ವಲಯ ಕಛೇರಿಗೆ ಸಲ್ಲಿಸುವುದು.
- ಕೇಂದ್ರ ಕಛೇರಿಯಿಂದ ಅರ್ಹ ಘಟಕಗಳ ಪ್ರಸ್ತಾವನೆಗಳನ್ನು ಪರಿಶೀಲಿಸಿದ ನಂತರ ಈ ಯೋಜನೆಯಡಿ ಶೇ.50 ರ ವಿದ್ಯುತ್ ರಿಯಾಯಿತಿಗೆ ಸಂಬಂಧಪಟ್ಟ ಮೊತ್ತವನ್ನು ಘಟಕಗಳಿಗೆ ಮಂಜೂರಾತಿ ನೀಡಿ ಮರುಪಾವತಿಯನ್ನು ಮಾಡುವುದು.
- ಈ ಯೋಜನೆ ಬಗ್ಗೆ ಸರ್ಕಾರದಿಂದ ಆಗಿಂದಾಗ್ಗೆ ಜಾರಿಯಾಗುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರತಕ್ಕದ್ದು.
- ಈ ಯೋಜನೆಯಡಿ ಪ್ರಯೋಜನ ಪಡೆದ ಫಲಾನುಭವಿಗಳು ರೇಪಿಯರ್ / ಲಾಳ ರಹಿತ ಮಗ್ಗಗಳನ್ನು ಸ್ಥಾಪಿಸಿದ ಸ್ಥಳದಿಂದ ವರ್ಗಾಯಿಸಿದಲ್ಲಿ ಇಲಾಖೆಗೆ ಮಾಹಿತಿ ನೀಡುವ ಕುರಿತು ಮುಚ್ಚಳಿಕೆ ಪತ್ರವನ್ನು ಕಡ್ಡಾಯವಾಗಿ ಪಡೆದು ಜಿಲ್ಲಾ ಕಛೇರಿಯಲ್ಲಿ ನಿರ್ವಹಿಸತಕ್ಕದ್ದು.
- ಈ ಯೋಜನೆಯು ದಿನಾಂಕ: 01.06.2017 ರಿಂದ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರೇವಯ್ಯ)
ಸರ್ಕಾರದ ಉಪಕಾರ್ಯದರ್ಶಿ (ಜವಳ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ಇವರಿಗೆ,**

1. ಮಹಾಲೇಖಪಾಲರು, (ಎ ಮತ್ತು ಇ) ಜಿ.ಅಂಡ್ ಎಸ್.ಎ., ಕರ್ನಾಟಕ, ಆಡಿಟ್ ಭವನ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ವೆಚ್ಚ-1, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಮಾನ್ಯ ಜವಳ ಮತ್ತು ಮುಜರಾಯಿ ಸಚಿವರ ಆಪ್ತ ಕಾರ್ಯದರ್ಶಿ.
6. ಜವಳ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳ ಇಲಾಖೆ, ಬೆಂಗಳೂರು.
7. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, 3ನೇ ಮಹಡಿ, ವಿಧಾನಸೌಧ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
9. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.